# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 158 |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 16.02.2022 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಜಿಲ್ಲಾಧಿಕಾರಿಗಳ ನ್ಯಾಯಾಲಯ ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಇರುವ ಅಪೀಲುಗಳ ಪ್ರಕರಣಗಳೆಷ್ಟು; | ಉತ್ತರವನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| (ಆ) | ಸದರಿ ಅಪೀಲುಗಳು ಎಷ್ಟು ವರ್ಷಗಳಿಂದ ಬಾಕಿ ಇವೆ; (ವರ್ಷಾವಾರು, ಜಿಲ್ಲಾವಾರು, ಉಪವಿಭಾಗಾವಾರು ವಿವರಗಳನ್ನು ನೀಡುವುದು); | |
| (ಇ) | ಬಹಳ ಕಾಲದಿಂದಲೂ ಪ್ರಕರಣಗಳು ಬಾಕಿ ಇರುವುದನ್ನು ಇತ್ಯರ್ಥಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? | ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ದೃಷ್ಟಿಯಿಂದ ಎಲ್ಲಾ ಅರೆ ನ್ಯಾಯಿಕ ಕಂದಾಯ ನ್ಯಾಯಾಲಯಗಳು ಪ್ರಕರಣಗಳ ವಿಚಾರಣೆಯನ್ನು ವಾರದ ಪ್ರತಿ ಮಂಗಳವಾರ ಮತ್ತು ಗುರುವಾರಗಳಂದು ಪೂರ್ಣದಿನ ಕಡ್ಡಾಯವಾಗಿ ನಡೆಸುವಂತೆ ಸರ್ಕಾರ ಸುತ್ತೋಲೆ ಸಂಖ್ಯೆ:ಕಂಇ 17 ಟಿಆರ್‌ಎಂ 2021, ದಿನಾಂಕ:22.02.2021ರಲ್ಲಿ ನಿರ್ದೇಶನ ನೀಡಲಾಗಿದೆ (ಪ್ರತಿ ಲಗತ್ತಿಸಿದೆ).<br><br>ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 193 ಟಿಆರ್‌ಎಂ 2019, ದಿನಾಂಕ:18.02.2021ರಲ್ಲಿ ಮ್ಯುಟೇಷನ್, ಖಾತಾ ಮತ್ತು ಆರ್.ಟಿ.ಸಿ. ಬದಲಾವಣೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಅರ್ಜಿಗಳು ವಿವಾದರಹಿತವಾದ ಪ್ರಕರಣಗಳಾಗಿದ್ದಲ್ಲಿ ಖಾತೆ ಬದಲಾವಣೆಯನ್ನು 60 ದಿನಗಳಲ್ಲಿ ಭೂಮಿ ತಂತ್ರಾಂಶದ ಮೂಲಕ ಸಕಾಲ ಸೇವೆಗಳಡಿ ಈಗಾಗಲೇ ಕ್ರಮವಹಿಸಲಾಗುತ್ತಿದೆ. ಸದರಿ ಅರ್ಜಿಯು ಆಸ್ತಿಯ ಹಕ್ಕಿನ ಹೊರತಾದ ವಿವಾದಿತ ಪ್ರಕರಣವಾಗಿದ್ದಲ್ಲಿ, ಸದರಿ ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 129 ರನ್ವಯ ಪರಿಶೀಲಿಸಿ, ಅರ್ಜಿ ಸ್ವೀಕೃತಗೊಂಡ ಮೂರು (03) ತಿಂಗಳೊಳಗಾಗಿ ಇತ್ಯರ್ಥಪಡಿಸಲು ತಹಶೀಲ್ದಾರ್‌ರವರು ಕ್ರಮವಹಿಸುವಂತೆ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮಗಳು, 1964ರ (ಅಪೀಲು/ಪುನರೀಕ್ಷಣೆ) ಕಲಂ 136(2) ಹಾಗೂ 136(3)ರ ಅಡಿಯಲ್ಲಿ ಕ್ರಮವಾಗಿ ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಿಸುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಎದುರುದಾರರಿಗೆ ನೋಟೀಸು ನೀಡಿದ ದಿನದಿಂದ ಆರು (06) ತಿಂಗಳ ಒಳಗಾಗಿ ಇತ್ಯರ್ಥಪಡಿಸುವಂತೆ ಸೂಚಿಸಲಾಗಿದೆ (ಪ್ರತಿ ಲಗತ್ತಿಸಿದೆ).<br><br>ಕಂದಾಯ ನ್ಯಾಯಾಲಯಗಳಲ್ಲಿ ದಾಖಲಾಗುವ ಅರೆ ನ್ಯಾಯಿಕ ಪ್ರಕರಣಗಳನ್ನು ತೀವ್ರಗತಿಯಲ್ಲಿ ವಿಲೇವಾರಿ ಮಾಡುವ ದೃಷ್ಟಿಯಿಂದ ರೆವಿನ್ಯೂ ಕೋರ್ಟ್ ಕೇಸ್ ಮಾನಿಟರಿಂಗ್ ಸಿಸ್ಟಮ್ [Revenue Court Case Monitoring System (RCCMS)] ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಸಾರ್ವಜನಿಕರು ಪ್ರಕರಣಗಳ ವಿಚಾರಣಾ ದಿನಾಂಕ, ಆದೇಶದ ಪ್ರತಿಗಳು ಇತ್ಯಾದಿ ವಿವರಗಳನ್ನು ಆನ್‌ಲೈನ್ ಮೂಲಕವೇ ಪಡೆಯಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| | | ಪ್ರತಿ ಮಾಹೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಅರೆ ನ್ಯಾಯಿಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ, ಪ್ರತಿ ಜಿಲ್ಲಾಧಿಕಾರಿಯವರು ಪ್ರತಿ ತಿಂಗಳು 75 ಪ್ರಕರಣಗಳನ್ನು ಹಾಗೂ ಉಪ ವಿಭಾಗಾಧಿಕಾರಿಯವರು - 100 ಪ್ರಕರಣಗಳನ್ನು ಇತ್ಯರ್ಥಪಡಿಸುವಂತೆ ಗುರಿ ನಿಗಧಿಪಡಿಸಲಾಗಿದೆ.<br><br>ಮುಂದುವರಿದು, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಪ್ರಕರಣಗಳು ಕಂಡುಬಂದ ಹಿನ್ನಲೆಯಲ್ಲಿ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಈಗಿರುವ ಎರಡು ವಿಶೇಷ ಜಿಲ್ಲಾಧಿಕಾರಿ ಹುದ್ದೆಗಳ ಜೊತೆಗೆ ಮತ್ತೊಂದು ವಿಶೇಷ ಜಿಲ್ಲಾಧಿಕಾರಿ-3 ಹುದ್ದೆಯನ್ನು ಸೃಜನೆ ಮಾಡಿ ಆದೇಶ ಹೊರಡಿಸಲಾಗಿದೆ. ಇನ್ನುಳಿದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ಬಾಕಿ ಇರುವ ಕಡೆಗಳಲ್ಲಿ ಉಪ ವಿಭಾಗಾಧಿಕಾರಿ ಮಟ್ಟದ ಅಧಿಕಾರಿಗಳನ್ನು ನೇಮಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅಧಿಕಾರ ನೀಡುವ ಸಂಬಂದ ಸೂಕ್ತ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ. |

**ಸಂ:ಕಂಇ 46 ಟಿಆರ್ಎಂ 2021**

**(ಆರ್. ಅಶೋಕ)**
ಕಂದಾಯ ಸಚಿವರು

# ಅನುಬಂಧ

## ಜಿಲ್ಲಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿ ನ್ಯಾಯಾಲಯಗಳ ಅಪೀಲು ಪ್ರಕರಣಗಳ ವಿವರ

| ಕ್ರ. ಸಂ. | ಜಿಲ್ಲೆ ಮತ್ತು ಉಪ ವಿಭಾಗಗಳ ಹೆಸರು | ಅಪೀಲು ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಅವಧಿ | | |
|---|---|---|---|---|---|
| | | | 1 ವರ್ಷ | 2 ವರ್ಷ | 3 ವರ್ಷ ಮೇಲ್ಪಟ್ಟು |
| 1 | **ಬೆಂಗಳೂರು ನಗರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಬೆಂಗಳೂರು ನಗರ | 3981 | 588 | 616 | 2777 |
| | ಉಪ ವಿಭಾಗಾಧಿಕಾರಿ, ಬೆಂ. ಉತ್ತರ | 6445 | 2312 | 931 | 3202 |
| | ಉಪ ವಿಭಾಗಾಧಿಕಾರಿ, ಬೆಂ. ದಕ್ಷಿಣ | 5322 | 1223 | 486 | 3613 |
| 2 | **ಬೆಂಗಳೂರು ಗ್ರಾಮಾಂತರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಬೆಂ. ಗ್ರಾಮಾಂತರ | 1470 | 288 | 216 | 966 |
| | ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ | 5355 | 1803 | 869 | 2683 |
| 3 | **ರಾಮನಗರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ರಾಮನಗರ | 611 | 72 | 110 | 429 |
| | ಉಪ ವಿಭಾಗಾಧಿಕಾರಿ, ರಾಮನಗರ | 3544 | 776 | 433 | 2335 |
| 4 | **ಚಿಕ್ಕಬಳ್ಳಾಪುರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ | 511 | 88 | 78 | 345 |
| | ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ | 4498 | 198 | 498 | 3802 |
| 5 | **ಕೋಲಾರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಕೋಲಾರ | 354 | 126 | 68 | 160 |
| | ಉಪ ವಿಭಾಗಾಧಿಕಾರಿ, ಕೋಲಾರ | 4857 | 449 | 554 | 3854 |
| 6 | **ತುಮಕೂರು ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ತುಮಕೂರು | 1163 | 151 | 101 | 911 |
| | ಉಪ ವಿಭಾಗಾಧಿಕಾರಿ, ತುಮಕೂರು | 6506 | 586 | 877 | 5043 |
| | ಉಪ ವಿಭಾಗಾಧಿಕಾರಿ, ಮಧುಗಿರಿ | 3412 | 337 | 293 | 2782 |
| | ಉಪ ವಿಭಾಗಾಧಿಕಾರಿ, ತಿಪಟೂರು | 636 | 312 | 112 | 212 |
| 7 | **ಚಿತ್ರದುರ್ಗ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಚಿತ್ರದುರ್ಗ | 1560 | 571 | 434 | 555 |
| | ಉಪ ವಿಭಾಗಾಧಿಕಾರಿ, ಚಿತ್ರದುರ್ಗ | 1394 | 392 | 205 | 797 |
| 8 | **ದಾವಣಗೆರೆ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ದಾವಣಗೆರೆ | 384 | 180 | 81 | 123 |
| | ಉಪ ವಿಭಾಗಾಧಿಕಾರಿ, ದಾವಣಗೆರೆ | 817 | 276 | 187 | 354 |
| 9 | **ಶಿವಮೊಗ್ಗ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಶಿವಮೊಗ್ಗ | 413 | 186 | 69 | 158 |
| | ಉಪ ವಿಭಾಗಾಧಿಕಾರಿ, ಶಿವಮೊಗ್ಗ | 404 | 198 | 52 | 154 |
| | ಉಪ ವಿಭಾಗಾಧಿಕಾರಿ, ಸಾಗರ | 713 | 163 | 134 | 416 |
| 10 | **ಮೈಸೂರು ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಮೈಸೂರು | 855 | 293 | 51 | 511 |
| | ಉಪ ವಿಭಾಗಾಧಿಕಾರಿ, ಮೈಸೂರು | 1571 | 628 | 300 | 643 |
| | ಉಪ ವಿಭಾಗಾಧಿಕಾರಿ, ಹುಣಸೂರು | 557 | 290 | 78 | 189 |
| 11 | **ಮಂಡ್ಯ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಮಂಡ್ಯ | 462 | 130 | 68 | 264 |
| | ಉಪ ವಿಭಾಗಾಧಿಕಾರಿ, ಮಂಡ್ಯ | 2158 | 470 | 384 | 1304 |
| | ಉಪ ವಿಭಾಗಾಧಿಕಾರಿ, ಪಾಂಡವಪುರ | 1968 | 249 | 235 | 1484 |

| ಕ್ರ. ಸಂ. | ಜಿಲ್ಲೆ ಮತ್ತು ಉಪ ವಿಭಾಗಗಳ ಹೆಸರು | ಅಪೀಲು ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಅವಧಿ | | |
|---|---|---|---|---|---|
| | | | 1 ವರ್ಷ | 2 ವರ್ಷ | 3 ವರ್ಷ ಮೇಲ್ಪಟ್ಟು |
| 12 | **ಚಾಮರಾಜನಗರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಚಾಮರಾಜನಗರ | 284 | 179 | 85 | 20 |
| | ಉಪ ವಿಭಾಗಾಧಿಕಾರಿ, ಕೊಳ್ಳೇಗಾಲ | 931 | 651 | 280 | 0 |
| 13 | **ಹಾಸನ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಹಾಸನ | 850 | 584 | 76 | 190 |
| | ಉಪ ವಿಭಾಗಾಧಿಕಾರಿ, ಹಾಸನ | 1134 | 974 | 105 | 55 |
| | ಉಪ ವಿಭಾಗಾಧಿಕಾರಿ, ಸಕಲೇಶಪುರ | 406 | 292 | 74 | 40 |
| 14 | **ಚಿಕ್ಕಮಗಳೂರು ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಚಿಕ್ಕಮಗಳೂರು | 887 | 112 | 95 | 680 |
| | ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು | 67 | 67 | 0 | 0 |
| | ಉಪ ವಿಭಾಗಾಧಿಕಾರಿ, ತರೀಕೆರೆ | 1237 | 327 | 159 | 751 |
| 15 | **ಕೊಡಗು ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಕೊಡಗು | 135 | 68 | 20 | 47 |
| | ಉಪ ವಿಭಾಗಾಧಿಕಾರಿ, ಕೊಡಗು | 586 | 218 | 70 | 298 |
| 16 | **ದಕ್ಷಿಣ ಕನ್ನಡ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ | 431 | 101 | 58 | 272 |
| | ಉಪ ವಿಭಾಗಾಧಿಕಾರಿ, ಮಂಗಳೂರು | 2084 | 842 | 563 | 679 |
| | ಉಪ ವಿಭಾಗಾಧಿಕಾರಿ, ಪುತ್ತೂರು | 952 | 158 | 119 | 675 |
| 17 | **ಉಡುಪಿ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಉಡುಪಿ | 154 | 119 | 35 | 0 |
| | ಉಪ ವಿಭಾಗಾಧಿಕಾರಿ, ಕುಂದಾಪುರ | 1580 | 1071 | 388 | 121 |
| 18 | **ಬೆಳಗಾವಿ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಬೆಳಗಾವಿ | 466 | 342 | 74 | 50 |
| | ಉಪ ವಿಭಾಗಾಧಿಕಾರಿ, ಬೆಳಗಾವಿ | 780 | 349 | 160 | 271 |
| | ಉಪ ವಿಭಾಗಾಧಿಕಾರಿ, ಬೈಲಹೊಂಗಲ | 844 | 505 | 180 | 159 |
| | ಉಪ ವಿಭಾಗಾಧಿಕಾರಿ, ಚಿಕ್ಕೋಡಿ | 911 | 901 | 10 | |
| 19 | **ಬಾಗಲಕೋಟೆ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಬಾಗಲಕೋಟೆ | 34 | 12 | 10 | 12 |
| | ಉಪ ವಿಭಾಗಾಧಿಕಾರಿ, ಬಾಗಲಕೋಟೆ | 172 | 25 | 96 | 51 |
| | ಉಪ ವಿಭಾಗಾಧಿಕಾರಿ, ಜಮಖಂಡಿ | 183 | 11 | 57 | 115 |
| 20 | **ವಿಜಯಪುರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ವಿಜಯಪುರ | 42 | 28 | 10 | 4 |
| | ಉಪ ವಿಭಾಗಾಧಿಕಾರಿ, ವಿಜಯಪುರ | 85 | 44 | 20 | 21 |
| | ಉಪ ವಿಭಾಗಾಧಿಕಾರಿ, ಇಂಡಿ | 67 | 48 | 10 | 9 |
| 21 | **ಧಾರವಾಡ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಧಾರವಾಡ | 116 | 61 | 21 | 34 |
| | ಉಪ ವಿಭಾಗಾಧಿಕಾರಿ, ಧಾರವಾಡ | 83 | 72 | 7 | 4 |
| 22 | **ಗದಗ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಗದಗ | 75 | 66 | 9 | 0 |
| | ಉಪ ವಿಭಾಗಾಧಿಕಾರಿ, ಗದಗ | 70 | 65 | 5 | 0 |
| 23 | **ಹಾವೇರಿ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಹಾವೇರಿ | 141 | 135 | 6 | 0 |
| | ಉಪ ವಿಭಾಗಾಧಿಕಾರಿ, ಹಾವೇರಿ | 384 | 347 | 27 | 10 |
| | ಉಪ ವಿಭಾಗಾಧಿಕಾರಿ, ಸವಣೂರು | 89 | 89 | 0 | 0 |

| ಕ್ರ ಸಂ. | ಜಿಲ್ಲೆ ಮತ್ತು ಉಪ ವಿಭಾಗಗಳ ಹೆಸರು | ಅಪೀಲು ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಅವಧಿ | | |
|---|---|---|---|---|---|
| | | | 1 ವರ್ಷ | 2 ವರ್ಷ | 3 ವರ್ಷ ಮೇಲ್ಪಟ್ಟು |
| 24 | **ಉತ್ತರ ಕನ್ನಡ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಉತ್ತರ ಕನ್ನಡ | 54 | 12 | 40 | 2 |
| | ಉಪ ವಿಭಾಗಾಧಿಕಾರಿ, ಕಾರವಾರ | 16 | 8 | 0 | 8 |
| | ಉಪ ವಿಭಾಗಾಧಿಕಾರಿ, ಶಿರಸಿ | 27 | 1 | 19 | 7 |
| | ಉಪ ವಿಭಾಗಾಧಿಕಾರಿ, ಕುಮಟಾ | 13 | 3 | 8 | 2 |
| | ಉಪ ವಿಭಾಗಾಧಿಕಾರಿ, ಭಟ್ಕಳ | 38 | 0 | 35 | 3 |
| 25 | **ಕಲಬುರಗಿ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಕಲಬುರಗಿ | 125 | 32 | 20 | 73 |
| | ಉಪ ವಿಭಾಗಾಧಿಕಾರಿ, ಕಲಬುರಗಿ | 411 | 302 | 61 | 48 |
| | ಉಪ ವಿಭಾಗಾಧಿಕಾರಿ, ಸೇಡಂ | 92 | 92 | 0 | 0 |
| 26 | **ಬಳ್ಳಾರಿ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಬಳ್ಳಾರಿ | 43 | 18 | 14 | 11 |
| | ಉಪ ವಿಭಾಗಾಧಿಕಾರಿ, ಬಳ್ಳಾರಿ | 514 | 116 | 108 | 290 |
| 27 | **ಬೀದರ್ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಬೀದರ | 159 | 41 | 95 | 23 |
| | ಉಪ ವಿಭಾಗಾಧಿಕಾರಿ, ಬೀದರ | 128 | 108 | 17 | 3 |
| | ಉಪ ವಿಭಾಗಾಧಿಕಾರಿ, ಬಸವಕಲ್ಯಾಣ | 52 | 48 | 3 | 1 |
| 28 | **ಕೊಪ್ಪಳ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಕೊಪ್ಪಳ | 19 | 19 | 0 | 0 |
| | ಉಪ ವಿಭಾಗಾಧಿಕಾರಿ, ಕೊಪ್ಪಳ | 225 | 155 | 45 | 25 |
| 29 | **ರಾಯಚೂರು ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ರಾಯಚೂರು | 219 | 190 | 21 | 8 |
| | ಉಪ ವಿಭಾಗಾಧಿಕಾರಿ, ರಾಯಚೂರು | 313 | 196 | 84 | 33 |
| | ಉಪ ವಿಭಾಗಾಧಿಕಾರಿ, ಲಿಂಗಸಗೂರು | 24 | 16 | 1 | 7 |
| 30 | **ಯಾದಗಿರಿ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ಯಾದಗಿರಿ | 9 | 1 | 0 | 8 |
| | ಉಪ ವಿಭಾಗಾಧಿಕಾರಿ, ಯಾದಗಿರಿ | 147 | 3 | 7 | 137 |
| 31 | **ವಿಜಯನಗರ ಜಿಲ್ಲೆ** | | | | |
| | ಜಿಲ್ಲಾಧಿಕಾರಿ, ವಿಜಯನಗರ | 88 | 88 | 0 | 0 |
| | ಉಪ ವಿಭಾಗಾಧಿಕಾರಿ, ಹೊಸಪೇಟೆ | 169 | 64 | 61 | 44 |
| | ಉಪ ವಿಭಾಗಾಧಿಕಾರಿ, ಹರಪನಹಳ್ಳಿ | 321 | 309 | 7 | 5 |
| | **ಒಟ್ಟು** | **27037** | **12745** | **4591** | **9701** |

# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 193 ಟಿಆರ್‌ಎಂ 2019

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18.02.2021.

## ಸು ತ್ತೋ ಲೆ

**ವಿಷಯ:** ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ / ತಹಶೀಲ್ದಾರರ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅರ್ಜಿಗಳು / ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥಪಡಿಸುವ ಕುರಿತು ಮಾರ್ಗಸೂಚಿಗಳು.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂ:ಕಂಇ 21 ಎಲ್‌ಜಿಪಿ 2016, ದಿನಾಂಕ:20.8.2016
2. ಸರ್ಕಾರದ ಆದೇಶ ಸಂ:ಕಂಇ 152 ಎಲ್‌ಜಿಜಡ್ 2016, ದಿನಾಂಕ:18.10.2016
3. ಸರ್ಕಾರದ ಆದೇಶ ಸಂ:ಕಂಇ 152 ಎಲ್‌ಜಿಜಡ್ 2016, ದಿನಾಂಕ:04.03.2017
4. ಸರ್ಕಾರದ ಸುತ್ತೋಲೆ ಸಂ:ಕಂಇ 305 ಎಲ್‌ಜಿಬಿ 2017, ದಿನಾಂಕ:05.05.2018
5. ಸರ್ಕಾರದ ಸುತ್ತೋಲೆ ಸಂ:ಕಂಇ 11 ಟಿಆರ್‌ಎಂ 2019, ದಿನಾಂಕ:21.01.2019
6. ಸರ್ಕಾರದ ಆದೇಶ ಸಂ:ಕಂಇ 193 ಟಿಆರ್‌ಎಂ 2019, ದಿನಾಂಕ:16.07.2019
7. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:6872/2013 ಪ್ರಕರಣದ ಆದೇಶ ದಿನಾಂಕ:24.01.2020.

** * **

ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ / ತಹಶೀಲ್ದಾರರ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅರ್ಜಿಗಳು ಮತ್ತು ಮೇಲ್ಮನವಿಯಂತಹ ಅರೆ ನ್ಯಾಯಿಕ ಪ್ರಕರಣಗಳಲ್ಲಿ ಶಾಸನಬದ್ಧ ಪ್ರಾಧಿಕಾರಗಳು ಸಂಬಂಧಪಟ್ಟ ಅರ್ಜಿದಾರರು, ಪ್ರತಿವಾದಿಗಳು ಹಾಗೂ ಅವಶ್ಯಕ ಇನ್ನಿತರ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ನಿಯಮಾನುಸಾರ ನೋಟೀಸ್‌ಗಳನ್ನು ಜಾರಿ ಮಾಡಿ, ದಾಖಲೆಗಳನ್ನು ಪಡೆದು, ಅಹವಾಲುಗಳನ್ನು ಆಲಿಸುವ ಮೂಲಕ ವಿಚಾರಣೆಯನ್ನು ನಡೆಸಿ ನಂತರ ಕಾನೂನಿನನ್ವಯ ಅರೆ ನ್ಯಾಯಿಕ ಅಧಿಕಾರವನ್ನು ಚಲಾಯಿಸಿ ತೀರ್ಪು / ಆದೇಶಗಳನ್ನು ಹೊರಡಿಸಬೇಕಾಗುತ್ತದೆ.

ಈ ರೀತಿಯ ಅರೆ ನ್ಯಾಯಿಕ ಪ್ರಕರಣಗಳಲ್ಲಿ ಅತಿ ವಿಳಂಬ ಧೋರಣೆ ಉಂಟಾದಲ್ಲಿ ಅರ್ಜಿದಾರರ ಹಿತಾಸಕ್ತಿಗೆ ತೀವ್ರ ಧಕ್ಕೆ ಮತ್ತು ಅನಾನುಕೂಲವಾಗಲಿದೆ. ಈ ಅಂಶಗಳನ್ನು ಅರೆ ನ್ಯಾಯಿಕ ಪ್ರಾಧಿಕಾರಗಳು ಗಮನದಲ್ಲಿಟ್ಟುಕೊಂಡು ಪ್ರಕರಣಗಳ ತ್ವರಿತ ವಿಲೇವಾರಿಗೆ ಕ್ರಮ ವಹಿಸುವುದು ಅತ್ಯವಶ್ಯವಿರುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಉಲ್ಲೇಖ (1), (2) ಮತ್ತು (4)ರಲ್ಲಿನ ಸುತ್ತೋಲೆಗಳಲ್ಲಿ ಸರ್ಕಾರದಿಂದ ಹಲವಾರು ಸೂಚನೆ / ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಆದಾಗ್ಯೂ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬ ಧೋರಣೆ ಮುಂದುವರಿಯುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ.

ಮುಂದುವರಿದು, ಉಲ್ಲೇಖ (7)ರಲ್ಲಿನ ರಿಟ್ ಅರ್ಜಿ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಅರೆ ನ್ಯಾಯಿಕ ಪ್ರಾಧಿಕಾರಗಳು ತಮ್ಮ ಶಾಸನಬದ್ಧ ಅಧಿಕಾರವನ್ನು ಚಲಾಯಿಸುವಲ್ಲಿ ಆಸಕ್ತಿಯಿಂದ ಸರಿಯಾಗಿ ಕಾರ್ಯನಿರ್ವಹಣೆ ಮಾಡದೆ ಅರೆ ನ್ಯಾಯಿಕ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿರುತ್ತದೆ. ಸದರಿ ರಿಟ್ ಅರ್ಜಿ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದಲ್ಲಿ

..2..

ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಕಂದಾಯ ನ್ಯಾಯಾಲಯಗಳಲ್ಲಿನ ಪಹಣಿ/ಆರ್.ಟಿ.ಸಿ./ಮ್ಯೂಟೇಷನ್ ದಾಖಲೆಗಳ ಬದಲಾವಣೆ/ತಿದ್ದುಪಡಿಗೆ ಸಂಬಂಧಿಸಿದ ಪ್ರಕರಣಗಳು/ ಮೇಲ್ಮನವಿಗಳ ನಿರ್ವಹಣೆಯ ಕುರಿತಾದ ಕಾರ್ಯವಿಧಾನಗಳಲ್ಲಿ ತರಬೇಕಾಗಿರುವ ಸುಧಾರಣಾತ್ಮಕ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಹಲವಾರು ಶಿಫಾರಸ್ಸು ಮತ್ತು ನಿರ್ದೇಶನಗಳನ್ನು ನೀಡಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿನ ಶಿಫಾರಸ್ಸು ಮತ್ತು ನಿರ್ದೇಶನಗಳ ಹಿನ್ನೆಲೆಯಲ್ಲಿ ಕಂದಾಯ ನ್ಯಾಯಾಲಯಗಳಲ್ಲಿನ ಅರೆ ನ್ಯಾಯಿಕ ಪ್ರಕರಣಗಳನ್ನು ಶೀಘ್ರ ಮತ್ತು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸಲು ಈಗಾಗಲೇ ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆಗಳಲ್ಲಿನ ಸೂಚನೆಗಳು ಹಾಗೂ ಸ್ವಾಭಾವಿಕ ನ್ಯಾಯವನ್ನು ಗಮನದಲ್ಲಿರಿಸಿಕೊಂಡು, ಈ ಕೆಳಕಂಡ ಮಾರ್ಗಸೂಚಿಗಳನ್ವಯ ಕಡ್ಡಾಯವಾಗಿ ಕಾರ್ಯನಿರ್ವಹಿಸಲು ನಿರ್ದೇಶನ ನೀಡಲಾಗಿದೆ.

1. ಮ್ಯುಟೇಷನ್, ಖಾತಾ ಮತ್ತು ಆರ್.ಟಿ.ಸಿ. ಬದಲಾವಣೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಅರ್ಜಿಗಳು ವಿವಾದರಹಿತವಾದ ಪ್ರಕರಣಗಳಾಗಿದ್ದಲ್ಲಿ ಖಾತೆ ಬದಲಾವಣೆಯನ್ನು 60 ದಿನಗಳಲ್ಲಿ ಭೂಮಿ ತಂತ್ರಾಂಶದ ಮೂಲಕ ಸಕಾಲ ಸೇವೆಗಳಡಿ ಈಗಾಗಲೇ ಕ್ರಮವಹಿಸಲಾಗುತ್ತಿದೆ. ಸದರಿ ಅರ್ಜಿಯು ಆಸ್ತಿಯ ಹಕ್ಕಿನ ಹೊರತಾದ ವಿವಾದಿತ ಪ್ರಕರಣವಾಗಿದ್ದಲ್ಲಿ, ಸದರಿ ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 129 ರನ್ವಯ ಪರಿಶೀಲಿಸಿ, ಅರ್ಜಿ ಸ್ವೀಕೃತಗೊಂಡ ಮೂರು (03) ತಿಂಗಳೊಳಗಾಗಿ ಇತ್ಯರ್ಥಪಡಿಸಲು ತಹಶೀಲ್ದಾರ್‌ರವರು ಕ್ರಮವಹಿಸುವುದು.

2. ಮ್ಯುಟೇಷನ್, ಖಾತಾ ಮತ್ತು ಆರ್.ಟಿ.ಸಿ. ಬದಲಾವಣೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಅರ್ಜಿಗಳು ಆಸ್ತಿಯ ಹಕ್ಕಿನ ಕುರಿತಾದ ವಿವಾದಕ್ಕೆ ಸಂಬಂಧಿಸಿದ್ದಲ್ಲಿ, ಈ ಬಗ್ಗೆ ತಹಶೀಲ್ದಾರರವರು ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣಾ ಅವಧಿ ಮುಕ್ತಾಯಗೊಂಡ ಹದಿನೈದು (15) ದಿನಗಳ ಒಳಗಾಗಿ ಉಭಯ ಪಕ್ಷಕಾರರಿಗೆ ಸಕ್ಷಮ ಸಿವಿಲ್ ನ್ಯಾಯಾಲಯಕ್ಕೆ ಮೊರೆ ಹೋಗುವಂತೆ ಸೂಕ್ತ ಹಿಂಬರಹ ನೀಡುವುದು.

3. ಕರ್ನಾಟಕ ಭೂ ಕಂದಾಯ ಅಧಿನಿಯಮಗಳು, 1964ರ ಕಲಂ 129 ರಡಿಯ ಪ್ರಕರಣದಲ್ಲಿ ತಹಶೀಲ್ದಾರರ ಆದೇಶದಿಂದ ಬಾಧಿತರಾದವರು ಕರ್ನಾಟಕ ಭೂ ಕಂದಾಯ ಅಧಿನಿಯಮಗಳು, 1964ರ (ಅಪೀಲು/ಪುನರೀಕ್ಷಣೆ) ಕಲಂ 136(2) ಹಾಗೂ 136(3) ರ ಅಡಿಯಲ್ಲಿ ಕ್ರಮವಾಗಿ ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಿಸುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಎದುರುದಾರರಿಗೆ ನೋಟೀಸು ನೀಡಿದ ದಿನದಿಂದ ಆರು (06) ತಿಂಗಳ ಒಳಗಾಗಿ ಇತ್ಯರ್ಥಪಡಿಸುವುದು.

4. ತಹಶೀಲ್ದಾರರು, ಉಪ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ನಿಗಧಿತ ಕಾಲಮಿತಿಯೊಳಗೆ ಪ್ರಕರಣ / ಮೇಲ್ಮನವಿಗಳನ್ನು ಇತ್ಯರ್ಥಪಡಿಸಲು ಸಾಧ್ಯವಾಗದ ಪಕ್ಷದಲ್ಲಿ, ಸದರಿ ವಿಳಂಬಕ್ಕೆ ಸಮರ್ಪಕವಾದ ಕಾರಣಗಳನ್ನು ದಾಖಲಿಸಿ ಮೇಲಿನ ಅಧಿಕಾರಿಗಳಿಗೆ ವರದಿ ಮಾಡುವುದು ಹಾಗೂ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮವಹಿಸುವುದು.

..3..

5. ಕಂದಾಯ ನ್ಯಾಯಾಲಯಗಳಲ್ಲಿ ದಾಖಲಾಗುವ ಎಲ್ಲಾ ಅರೆ ನ್ಯಾಯಿಕ ಪ್ರಕರಣಗಳನ್ನು ಆರ್.ಸಿ.ಸಿ.ಎಂ.ಎಸ್. ತಂತ್ರಾಂಶದ ಮೂಲಕವೇ ನಿರ್ವಹಿಸುವ ಕುರಿತಂತೆ ಉಲ್ಲೇಖ (5) ರ ಸರ್ಕಾರದ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ, ಪ್ರಕರಣಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವಂತೆ ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ.

6. ಖಾತಾ, ಮ್ಯುಟೇಶನ್ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ತಹಶೀಲ್ದಾರರು ಸದರಿ ಅರ್ಜಿಯಲ್ಲಿನ ವಿವಾದವು ಇನಾಂ ರದ್ದತಿ ಕಾಯ್ದೆ, ಪಿಟಿ.ಸಿ.ಎಲ್ ಕಾಯ್ದೆ, ಸರ್ವೆ ಕೆಲಸ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿರುವುದೆ ಎಂಬುದರ ಕುರಿತು ಪರಿಶೀಲಿಸಿ, ಪ್ರತಿವಾದಿ/ತಕರಾರುದಾರರಿಗೆ ನೋಟೀಸ್ ಜಾರಿ ಮಾಡಿದ 30 ದಿನಗಳ ಕಾಲಾವಧಿಯೊಳಗೆ ಅರ್ಜಿದಾರರಿಗೆ ಸ್ಪಷ್ಟ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.

7. ಕಂದಾಯ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ನಿರ್ವಹಿಸಲು ಜಾರಿಗೆ ತಂದಿರುವ ಆರ್.ಸಿ.ಸಿ.ಎಂ.ಎಸ್. ತಂತ್ರಾಂಶದಲ್ಲಿ ಪ್ರಕರಣಗಳ ಶೀಘ್ರ ವಿಲೇವಾರಿ ಹಾಗೂ ತಂತ್ರಾಂಶದ ಸುಧಾರಣೆ ತರುವ ನಿಟ್ಟಿಯಲ್ಲಿ ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ ಜಿಲ್ಲೆ/ ಉಪ ವಿಭಾಗ/ತಾಲ್ಲೂಕು ಮಟ್ಟದ ಸಮಿತಿಗಳನ್ನು ಹಾಗೂ ಉಲ್ಲೇಖ (6)ರ ಸರ್ಕಾರದ ಅದೇಶದಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶಗಳನ್ವಯ ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿ ಪ್ರಗತಿಯನ್ನು ಪರಿಶೀಲಿಸುವುದು. ಮುಂದುವರಿದು, ಪ್ರಾದೇಶಿಕ ಆಯುಕ್ತರುಗಳು ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿಯ ಕುರಿತು ಪ್ರತಿ ತಿಂಗಳು ಸಭೆ ಕರೆದು ಪ್ರಗತಿ ಪರಿಶೀಲನೆ ನಡೆಸುವುದು.

19/02/2024

**(ಮಹೇಂದ್ರ ಜೈನ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ (ಪ್ರ).

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ / ಮೈಸೂರು ವಿಭಾಗ / ಬೆಳಗಾವಿ ವಿಭಾಗ ಮತ್ತು ಕಲಬುರಗಿ ವಿಭಾಗ.
2. ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು.
3. ನಿರ್ದೇಶಕರು, ಭೂಮಿ ಮತ್ತು ಯು.ಪಿ.ಓ.ಆರ್., ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು
5. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ } - ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ
6. ಎಲ್ಲಾ ತಹಶೀಲ್ದಾರರುಗಳಿಗೆ
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ & ಯು.ಪಿ.ಓ.ಆರ್.), ಬಹುಮಹಡಿ ಕಟ್ಟಡ
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಕಂದಾಯ), ಬಹುಮಹಡಿ ಕಟ್ಟಡ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 17 ಟಿಆರ್‌ಎಂ 2021

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22.02.2021

**ಸುತ್ತೋಲೆ**

**ವಿಷಯ**: ಕಂದಾಯ ನ್ಯಾಯಾಲಯ ಪ್ರಕರಣಗಳ ಶೀಘ್ರ ವಿಲೇವಾರಿ ಕುರಿತು

**ಉಲ್ಲೇಖ**: ಸರ್ಕಾರದ ಸುತ್ತೋಲೆ ಸಂ:ಕಂಇ 152 ಎಲ್‌ಜಿಜಡ್ 2016 ದಿನಾಂಕ:18.10.2016

ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ/ತಹಶೀಲ್ದಾರ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅರ್ಜಿಗಳು ಮತ್ತು ಮೇಲ್ಮನವಿಯಂತಹ ಅರೆ ನ್ಯಾಯಿಕ ಪ್ರಕರಣಗಳಲ್ಲಿ ಸಂಬಂಧಪಟ್ಟ ಪ್ರಾಧಿಕಾರಿಗಳು ತಮ್ಮ ಶಾಸನಬದ್ಧ ಅಧಿಕಾರವನ್ನು ಚಲಾಯಿಸಿ ಕಾನೂನಿನ್ವಯ ವಿಚಾರಣೆ ಕೈಗೊಂಡು ಅರೆ ನ್ಯಾಯಿಕ ತೀರ್ಪು/ ಆದೇಶಗಳನ್ನು ಹೊರಡಿಸಬೇಕಾಗುತ್ತದೆ. ಅದರಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ಅರೆ ನ್ಯಾಯಿಕ ಪ್ರಕರಣಗಳ ವಿಚಾರಣೆಯನ್ನು ಪ್ರತಿ ವಾರದಲ್ಲಿ ಕನಿಷ್ಠ 02 ಬಾರಿ ನಡೆಸುವುದು ಸೇರಿದಂತೆ ಪ್ರಕರಣಗಳನ್ನು ಶೀಘ್ರ ಮತ್ತು ಪರಿಣಾಮಕಾರಿಯಾಗಿ ವಿಲೇವಾರಿ ಮಾಡಲು ಹಲವಾರು ಸೂಚನೆಗಳನ್ನು ನೀಡಲಾಗಿರುತ್ತದೆ. ಆದಾಗ್ಯೂ ಕಂದಾಯ ನ್ಯಾಯಾಲಯಗಳಲ್ಲಿ ಕಲಾಪಗಳನ್ನು ನಿಯಮಿತವಾಗಿ ನಡೆಸದೆ ಅರೆ ನ್ಯಾಯಿಕ ಪ್ರಕರಣಗಳು ಇತ್ಯರ್ಥವಾಗುವಲ್ಲಿ ವಿಳಂಬವಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿರುತ್ತದೆ.

ಈ ಹಿನ್ನಲೆಯಲ್ಲಿ ಉಲ್ಲೇಖಿತ ಸುತ್ತೋಲೆಯಲ್ಲಿನ ಸೂಚನೆಗಳನ್ನು ಕಡ್ಡಾಯ ಪಾಲಿಸುವುದರ ಜೊತೆಗೆ, **ಕಂದಾಯ ನ್ಯಾಯಾಲಯಗಳಲ್ಲಿನ ಅರೆ ನ್ಯಾಯಿಕ ಪ್ರಕರಣಗಳ ವಿಚಾರಣೆಯನ್ನು ವಾರದ ಪ್ರತಿ ಮಂಗಳವಾರ ಮತ್ತು ಗುರುವಾರಗಳಂದು ಪೂರ್ಣ ದಿನ ಕಡ್ಡಾಯವಾಗಿ ನಡೆಸುವಂತೆ ಸೂಚಿಸಲಾಗಿದೆ.** ಸದರಿ ದಿನಗಳಂದು ನ್ಯಾಯಾಲಯಗಳ ಕಲಾಪಗಳನ್ನು ನಡೆಸಲು ಸಾಧ್ಯವಾಗದಿರುವ ಯಾವುದಾದರೂ ಅನಿವಾರ್ಯ ಆಡಳಿತಾತ್ಮಕ ಕಾರಣಗಳಿದ್ದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳ ಅನುಮತಿ ಪಡೆಯುವುದು ಹಾಗೂ ಸದರಿ ದಿನದ ಕಲಾಪವನ್ನು ಅದೇ ವಾರದ ಮತ್ತೊಂದು ದಿನದಂದು ನಡೆಸಲು ಕ್ರಮವಹಿಸತಕ್ಕದ್ದು.

**(ಎನ್.ಮಂಜುನಾಥ್ ಪ್ರಸಾದ್)** 22/2/2021
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪ್ರ)
ಕಂದಾಯ ಇಲಾಖೆ
22.02.2021

ಇವರಿಗೆ:

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು /ಬೆಳಗಾವಿ ಮತ್ತು ಕಲುಬುರುಗಿ ವಿಭಾಗಗಳು.
2. ಆಯುಕ್ತರು, ಭೂ ಮಾಪಕ ಹಾಗೂ ಪದನಿಮಿತ್ತ ನಿರ್ದೇಶಕರು, ಭೂಮಿ ಮತ್ತು ಯು.ಪಿ.ಓ.ಆರ್ ಕಂದಾಯ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು

4. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ)
5. ಎಲ್ಲಾ ತಹಶೀಲ್ದಾರರುಗಳಿಗೆ (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ)
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ( ವಿಪತ್ತು ನಿರ್ವಹಣೆ, ಭೂಮಿ ಮತ್ತು ಯು.ಪಿ.ಓ.ಆರ್ )ಬಹುಮಹಡಿ ಕಟ್ಟಡ.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ( ಭೂ ಮಂಜೂರಾತಿ ಮತ್ತು ಭೂ ಕಂದಾಯ) ಬಹುಮಹಡಿ ಕಟ್ಟಡ.